


- ಅಕ್ಟೋಬರ್ ಸಂಚಿಕೆ ರಸಪಾಕದಂತಿತ್ತು. ಚಂದ್ರಶೇಖರ ವಸ್ತ್ರದ ಅವರ 'ಕುಣಾಲ' ಕಥೆ ಇಡಿಯಾಗಿ ಆವರಿಸಿಕೊಂಡಿತು. ನಿರೂಪಣಾ ಶೈಲಿ ಅನುಪಮ. ಕುಣಾಲನ ನೈತಿಕ ಪ್ರಜ್ಞೆ, ತಿಷ್ಯರಕ್ಷಿತಾಳ ವಿವೇಕಶೂನ್ಯತೆ ಮತ್ತು ಸಾಮ್ರಾಟ ಅಶೋಕನ ಲೋಲುಪತೆಯನ್ನು ಕಥೆಯಲ್ಲಿ ಅದ್ವಿತೀಯವಾಗಿ ಕಟ್ಟಿಕೊಟ್ಟಿದ್ದಾರೆ.

  **ಜಗದೀಶ್ವರಯ್ಯ ಮ. ಮಠಪತಿ, ಗದಗ**

- ಗಾಂಧಿ ವಿಶೇಷ ಸಂಚಿಕೆ ಅರ್ಥಪೂರ್ಣವಾಗಿತ್ತು. ಗಾಂಧಿ ಕುರಿತಾದ ಎಲ್ಲಾ ಲೇಖನಗಳು ಮನಸನ್ನು ಆರೋಗ್ಯಕರ ಚಿಂತನೆಗೆ ಹಚ್ಚಿದವು. ಕಥಾಲೋಕದಲ್ಲಿ ಇಣುಕಿದಾಗ ಒಂದೊಂದು ಕಥೆಯೂ ವಿವಿಧ ಮಜಲುಗಳನ್ನು ಪರಿಚಯಿಸುವಂತಿದ್ದವು.

  **ಬಿ.ಆರ್. ಅಣ್ಣಾಸಾಗರ, ಸೇಡಂ**

- ಗಾಂಧೀಜಿ ಲೇಖನಗಳಿಂದ ಈ ಸಂಚಿಕೆಯ ಮೌಲ್ಯ ಹೆಚ್ಚಿದೆ. ನಟರಾಜ್ ಹುಳಿಯಾರ್ ಅವರ 'ಗಾಂಧೀಜಿಯ ಅಪೂರ್ವ ಪತ್ರಿಕಾ ಲೋಕ' ಲೇಖನ ಗಾಂಧೀಜಿ ಅವರ ಪತ್ರಿಕಾ ಬದುಕಿನ ಸಾಧನೆಯ ಮೇಲೆ ಬೆಳಕು ಚೆಲ್ಲುವಂತಿದೆ. 'ಕುಣಾಲ' ಕಥೆಯಲ್ಲಿ ಬರುವ ತಿಷ್ಯರಕ್ಷಿತಾಳ ಪಾತ್ರ ನಂಜುಂಡ ಕವಿ ಚಿತ್ರಿಸಿದ ಕುಮಾರ ರಾಮನ ಮಲತಾಯಿ ರಾಣಿ ರತ್ನಾಜಿಯ ವಿಷಮ ದಾಂಪತ್ಯವನ್ನು ನೆನಪಿಸಿತು.

  **ಕಳಮಳ್ಳಿ ಪ್ರಭಾಕರ, ಕೊಪ್ಪಳ**

- ಫಾತಿಮಾ ರಲಿಯಾ ಅವರ 'ನನ್ನೂರಿಗೆ ಮನುಷ್ಯರನ್ನು ಹುಟ್ಟಿಸಿ ಕಳಿಸು' ಕವಿತೆ ಹೊಮ್ಮಿಸುವ ಭಾವ ಸಾಮಾಜಿಕ ಸೌಹಾರ್ದತೆಗೆ ಅತ್ಯಗತ್ಯವಾಗಿದೆ.

  **ಅಶೋಕ್ ಎಚ್, ಬೆಂಗಳೂರು**

  **ಮಲ್ಲಿಕಾರ್ಜುನ ಸುರಧೇನುಪುರ, ಬೆಂಗಳೂರು**

- ಆಶಾ ರಘು ಅವರ 'ಒಳಗುದಿ' ಕಥೆ ಮನಕಲುಕಿತು. ವಯಸ್ಸಾದಂತೆ ಅನಾರೋಗ್ಯಕ್ಕೆ ಒಳಗಾಗಿ ಕಷ್ಟಪಡುವ ಬಹುತೇಕ ಸಾಮಾನ್ಯ ವರ್ಗದ ಜನರ ಪರಿಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿತ್ತು.

  **ಸಿ.ಕೆ. ಗಣಪ್ಪನವರ ಡಂಬಳ**

- ರಾಜಕುಮಾರ ಕುಲಕರ್ಣಿ ಅವರ 'ಗೋಡೆಗಳು', ಚಿಂತಾಮಣಿ ಕೊಡ್ಲೆಕೆರೆ ಅವರ 'ಅತಿಥಿ', ಉಷಾ ನರಸಿಂಹನ್ ಅವರ 'ಫ್ಯಾಮಿಲಿ ಪೆನ್‌ಶನ್' ಕಥೆಗಳು ವಿಶೇಷ ಅನುಭೂತಿ ನೀಡಿದವು. ಬಿ.ಆರ್. ಲಕ್ಷ್ಮಣರಾವ್ ಅವರ 'ಸ್ವಯಂವರ' ಪ್ರಬಂಧ ಹಿಡಿಸಿತು.

  **ವೀರಯ್ಯಸ್ವಾಮಿ ಕಲ್ಮಠ, ರಾಣೆಬೆನ್ನೂರು**

- ಡಾ. ಸಿ. ರವೀಂದ್ರನಾಥ್ ಅವರ ಗಾಂಧೀಜಿಯ ಕುರಿತಾದ ಹಾಯ್ಕುಗಳು ಮೆಚ್ಚುಗೆಯಾದವು. ಚಿತ್ತ ಕೆತ್ತಿದ ಚಿತ್ರ, ಕಾವ್ಯ ಜೂಟಾಟ ಅಂಕಣಗಳು ಸಂಚಿಕೆಯ ಮೆರಗು ಹೆಚ್ಚಿಸಿವೆ.

  **ಜ್ಯೋತಿ ಪರ್ವತೆ, ಹುಬ್ಬಳ್ಳಿ**

- ಕರ್ಕಿ ಕೃಷ್ಣಮೂರ್ತಿ ಅವರ ಲೇಖನ ಇನ್ನೊಂದು ಜಗತ್ತಿನ ಪರಿಚಯ ಮಾಡಿಸಿತು. ಆರಾಧನೆಯ ವಿವಿಧ ಮಜಲುಗಳು ಅಚ್ಚರಿ ಹುಟ್ಟಿಸಿದವು.

  **ಶಂಕರನಾರಾಯಣ ಭಟ್, ಹೊನ್ನಾವರ**